ದಿ: 06-11-2019 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಶ್ರೀ ಕೆ.ಎನ್.ಬಿ. ವಕೀಲರಿಂದ :-

1. ಸಿದ್ದಜ್ಜಿ ಎನ್ನುವವರು ಬೋಗಪ್ಪ, ಆತನ ಹೆಂಡತಿ ಕರಿಯಮ್ಮ ಮತ್ತು ಮಗ ತಿಮ್ಮಪ್ಪನನ್ನು ವಾರಸುದಾರಿಕೆಗಾಗಿ ತನ್ನ ಮನೆಯಲ್ಲಿಯೇ ಇಟ್ಟು ಕೊಂಡಿದ್ದರು ಅಂದರೆ ಸರಿ. ಸದರಿ ಬೋಗಪ್ಪನ ಮೊದಲ ಹೆಂಡತಿಯ ಮಗ ತಿಮ್ಮಪ್ಪನಿಗೆ ಪ್ರತಿವಾದಿ 9 ರಿಂದ 11 ರವರು ಮಕ್ಕಳು ಅಂದರೆ ಸರಿ. ಬೋಗಪ್ಪನ 2 ನೇ ಹೆಂಡತಿ ಕೆಂಗಜ್ಜಿಗೆ ನಮ್ಮ ತಂದೆ ಬೋಗಪ್ಪ, 1 ನೇ ಪ್ರತಿವಾದಿ ಮತ್ತು ಸಣ್ಣ ತಿಮ್ಮಪ್ಪ ಎನ್ನುವ ಮೂರು ಜನ ಮಕ್ಕಳು ಅಂದರೆ ಸರಿ. ಸದರಿ ಬೋಗಪ್ಪನಿಗೆ ನಾನು ಹಾಗೂ 2 ನೇ ವಾದಿ ಮಕ್ಕಳು ಅಂದರೆ ಸರಿ. 2 ನೇ ಮಗ ಹನುಮಂತಪ್ಪನಿಗೆ ರಾಮಪ್ಪ ಮತ್ತು ಕರಿಯಪ್ಪ ಎನ್ನುವವರು ಮಕ್ಕಳಾಗಿರುತ್ತಾರೆ ಅಂದರೆ ಸರಿ. ಸಣ್ಣ ತಿಮ್ಮಪ್ಪನಿಗೆ ಕೃಷ್ಣಮೂರ್ತಿ, ಗಿರಿಜಮ್ಮ, ಹೊನ್ನಮ್ಮ, ಕಮಲಮ್ಮ ಮತ್ತು ಟಿ. ಮಮಂಜುನಾಥ ಎನ್ನುವವರು ಮಕ್ಕಳಾಗಿರುತ್ತಾರೆ ಅಂದರೆ ಸರಿ. ಮೇಲೆ ಹೇಳಿದ ಜನರು ಒಟ್ಟು ಕುಟುಂಬದ ಸದಸ್ಯರಾಗಿರುತ್ತಾರೆ ಅಂದರೆ ಸರಿ. ಸಿದ್ದಜ್ಜಿ ಬೋಗಪ್ಪನನ್ನು ವಾರಸುದಾರಿಕೆಗೆ ಕರೆದುಕೊಂಡು ಬಂದಾಗ ಆತನಿಗೆ 17-18 ವರ್ಷ ಆಗಿತ್ತು ಅಂದರೆ ನನಗೆ ಗೊತ್ತಿಲ್ಲ.

2. ರಿ.ಸ.ನಂ.79/1 ರ 10 ಎಕರೆ 17 ಗುಂಟೆ ಮೂಲತಃ ಸಿದ್ದಜ್ಜಿರವರ ಸ್ವಯಾರ್ಜಿತ ಸ್ವತ್ತಾಗಿರುತ್ತದೆ ಅಂದರೆ ಸರಿ. ಸಿದ್ದಜ್ಜಿ ಬೋಗಪ್ಪನನ್ನು, ಆತನ ಹೆಂಡತಿ ಕರಿಯಮ್ಮ ಮತ್ತು ಅವರ ಮಗ ತಿಮ್ಮಪ್ಪನನ್ನು ಕರೆದುಕೊಂಡು ಬಂದಾಗ ಬೋಗಪ್ಪ ಕೆಂಗಜ್ಜಿಯನ್ನು ಮದುವೆ ಆಗಿರಲಿಲ್ಲ ಅಂದರೆ ಸರಿ. ಸಿದ್ದಜ್ಜಿ ಸದರಿ 10 ಎಕರ 17 ಗುಂಟೆ ಜಮೀನನ್ನು ಬೋಗಪ್ಪನ ಮಗ ತಿಮ್ಮಪ್ಪನಿಗೆ ಕೊಟ್ಟಿತ್ತು ಅಂದರೆ ಸರಿಯಲ್ಲ. ಸದರಿ ತಿಮ್ಮಪ್ಪರವರು ಸದರಿ ಜಮೀನನ್ನು 1975-76 ರವರೆಗೂ ಅನುಭವಿಸುತ್ತಿದ್ದರು ಅಂದರೆ ಸರಿಯಲ್ಲ. ಸದರಿ ಜಮೀನಿನ ಪಹಣಿ ಪತ್ರಿಕೆ 1975-76 ರವರೆವಿಗೂ ಸದರಿ ತಿಮ್ಮಪ್ಪನ ಹೆಸರಿನಲ್ಲಿತ್ತು ಅಂದರೆ ಸರಿಯಲ್ಲ. ಐಟಂ ನಂ.15 ರಿಂದ 20 ರ ಸ್ವತ್ತುಗಳು ಮೂಲತಃ ತಿಮ್ಮಪ್ಪನಿಗೆ ಸೇರಿರುವುದರಿಂದ ಪ್ರತಿವಾದಿ 9 ರಿಂದ 11 ರವರು ಮಾತ್ರ ಅದರ ಮಾಲೀಕರಾಗಿರುತ್ತಾರೆ ಅಂದರೆ ಸರಿಯಲ್ಲ. ಐಟಂ ನಂ.1 ರಿಂದ 14 ಮತ್ತು 21 ರಿಂದ 66 ರ ಸ್ವತ್ತುಗಳು ವಾದಿ ಮತ್ತು ಪ್ರತಿವಾದಿಯರ ಒಟ್ಟು ಆಸ್ತಿಗಳಾಗಿರುತ್ತವೆ ಅಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಬೋಗಪ್ಪನ ಮೊದಲ ಹೆಂಡತಿ ಮಗ ತಿಮ್ಮಪ್ಪನಿಗೆ ಭಾಗ ಕೊಟ್ಟಿದ್ದು, ಆತನು ಬೇರೆಯಾಗಿರುವುದರಿಂದ ಸದರಿ ಸ್ವತ್ತುಗಳು ಅವರ ಒಟ್ಟು ಕುಟುಂಬದ ಸ್ವತ್ತುಗಳಗಿರುವುದಿಲ್ಲ ಎಂದು ನುಡಿಯುತ್ತಾರೆ. ತಿಮ್ಮಪ್ಪನಿಗೆ ಯಾವ ವರ್ಷದಲ್ಲಿ ಭಾಗ ಕೊಡಲಾಯಿತು ಎಂದು ನನಗೆ ಗೊತ್ತಿಲ್ಲ. ತಿಮ್ಮಪ್ಪನಿಗೆ ಯಾವ ಸ್ವತ್ತುಗಳನ್ನು ಭಾಗದಲ್ಲಿ ಕೊಡಲಾಯಿತು ಎಂದು ನನಗೆ ಗೊತ್ತಿಲ್ಲ.

3. ತಿಮ್ಮಪ್ಪ ಅನಕ್ಷರಸ್ಥನಿದ್ದು, ಅಷ್ಟೊಂದು ತಿಳುವಳಿಕೆ ಇರಲಿಲ್ಲ ಅಂದರೆ ಸರಿಯಲ್ಲ. ಆಗಾಗಿ ಆತನಿಗೆ ಮೋಸ ಮಾಡಿ ನಮ್ಮ ತಂದೆ ಮತ್ತು ಚಿಕ್ಕಪ್ಪಂದಿರು ಆಸ್ತಿಗಳನ್ನು ತಮ್ಮ ಹೆಸರಿಗ ಮಾಡಿಸಿಕೊಂಡಿರುತ್ತಾರೆ ಅಂದರೆ ಸರಿಯಲ್ಲ. ಐಟಂ ನಂ.15 ರಿಂದ 20 ರ ಸ್ವತ್ತುಗಳು ಪ್ರತಿವಾದಿ 9 ರಿಂದ 11 ರವರ ಪ್ರತ್ಯೇಕವಾದ ಸ್ವತ್ತಾಗಿರುತ್ತದೆ ಅಂದರೆ ಸರಿಯಲ್ಲ. ಪ್ರತಿವಾದಿ 9 ರಿಂದ 11 ರವರಿಗೆ ಉಳಿದ ಎಲ್ಲಾ ಸ್ವತ್ತುಗಳ ಮೇಲೆ ಹಕ್ಕು ಅಧಿಕಾರ ಇರುತ್ತದೆ ಅಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.